# ಯೋಗ್ಯರಿಗೆ ಮತ ಚಲಾಯಿಸಿ, ಹೊಣೆಯರಿತು ಮತ ಚಲಾಯಿಸಿ

**ಬೆಂಗಳೂರಿನ ಮತದಾರರಿಗೆ ಸಂಸತ್ ಸದಸ್ಯ ರಾಜೀವ್ ಚಂದ್ರಶೇಖರ್ ಅವರ ಸಂದೇಶ**

ಇದು ಚುನಾವಣಾ ಸಮಯವಾದ್ದರಿಂದ ಎಲ್ಲಾ ಮತದಾರರೆದರು ಪ್ರಮುಖ ಪ್ರಶ್ನೆಯೊಂದು ಎದುರಾಗಿದೆ – ಯಾರಿಗೆ ಮತ ನೀಡಬೇಕು? ನಾನು ಮುಂಜಾನೆ ವಾಯುವಿಹಾರಕ್ಕೆ ಹೋದಾಗ, ಸಾರ್ವಜನಿಕ ಸಮಾರಂಭಗಳಲ್ಲೆಲ್ಲಾ ನನಗೆದುರಾಗುವ ಹಲವಾರು ಬೆಂಗಳೂರಿಗರು ಇದೇ ಪ್ರಶ್ನೆಯನ್ನು ಕೇಳುತ್ತಾರೆ,

ಯಾರಿಗೆ ಮತ ನೀಡಬೇಕು ಎಂದು ವಿವರಿಸುವುದು ನನ್ನ ಕೆಲಸವಲ್ಲ. ಆದರೆ ಇಂದು ಬೆಂಗಳೂರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಮಾತ್ರ ಅವರಿಗೆ ಹೇಳ ಬಲ್ಲೆ, ನಿಮ್ಮ ಕ್ಷೇತ್ರದ ಅಭ್ಯರ್ಥಿಗಳಿಗೆ ನೀವು ಈ ಕುರಿತು ಪ್ರಶ್ನೆಯೆತ್ತಬಹುದು.

ಕಳೆದ 15 ವರ್ಷಗಳಲ್ಲಿ ಬೆಂಗಳೂರು ಹೊಸ ಭಾರತದ ಚಹರೆಯಾಗಿ ಬದಲಾಗಿದೆ. ಈ ಊರು ಬಂಡವಾಳ ಹೂಡಿಕೆಗೆ ಪ್ರಮುಖ ಬಾಗಿಲೂ ಹೌದು, ಕಳೆದ ಕೆಲವು ವರ್ಷಗಳಲ್ಲಿ ಅತ್ಯಮೋಘ ಎನ್ನುವಂತಹ ಬದಲಾವಣೆಗೆ ಈ ಊರು ಸಾಕ್ಷಿಯಾಗಿದೆ. ಅಷ್ಟೇ ಅಲ್ಲದೆ, ಮುಂದೆಯೂ ಬದಲಾವಣೆಯ ಕೇಂದ್ರ ಸ್ಥಾನವಾಗಲಿರುವುದು ನಿಶ್ಚಿತ, ಈ ಬೆಳೆವಣಿಗೆಯನ್ನು ನಿರ್ವಹಿಸಲು ಜಾಗೃತರಾದ ಮತ್ತು ಬದ್ಧತೆಯುಳ್ಳ ಜನಸೇವಕರ ಅಗತ್ಯವಿದೆ ಮತ್ತು ಮೊತ್ತಮೊದಲು ಅಭ್ಯರ್ಥಿಗಳು ಇದಕ್ಕೆ ಬದ್ಧರಾಗಿರಬೇಕು.

ಇಲ್ಲಿನ ಮೂಲಭೂತಸೌಕರ್ಯಗಳನ್ನು ಮೀರಿ ನಗರ ಬೆಳೆದಿದೆ. ಅದರ ಪರಿಣಾಮವಾಗಿ ಒಂದು ಅವ್ಯವಸ್ಥಿತ ನಗರದ ಚಿತ್ರ ನಮಗೆ ಕಾಣುತ್ತಿದೆ. ಅತಿ ಶೀಘ್ರವಾಗಿ ಮೂಲಭೂತ ಸೌಕರ್ಯಗಳನ್ನು ಒದಗಸುವುದೇ ನಮ್ಮೆದುರಿನ ದೊಡ್ಡ ಸವಾಲಗಿದೆ.

ಈ ಸನ್ನಿವೇಶ ಇನ್ನಷ್ಟು ಉಲ್ಬಣಾವಸ್ಥೆ ತಲುಪಬಹುದು! 2020ರ ವೇಳೆಗೆ ಬೆಂಗಳೂರಿನ ಜನಸಂಖ್ಯೆ 1.6 ಕೋಟಿಗಿಂತಲೂ ಹೆಚ್ಚಾಗಬಹುದು ಎನ್ನುವುದನ್ನು ನಾವು ಅರ್ಥಮಾಡಿಕೊಳ್ಳಬೇಕು, ಈಗಿನಂತೆಯೇ ದೂರದೃಷ್ಟಿಯಿಲ್ಲದ ಯೋಜನೆಗಳು ಮುಂದುವರಿದರೆ, ಈ ನಗರಕ್ಕಿರುವ ಐತಿಹಾಸಿಕ ಅನುಕೂಲವೆಲ್ಲ ವ್ಯರ್ಥವಾಗಿ, ಇಲ್ಲಿನ ನಿವಾಸಿಗಳಿಗೆಲ್ಲ ಅನಾನುಕೂಲಕರ ವಾತಾವರಣ ಎದುರಾಗುವುದು ನಿಶ್ಚಿತ, ನಾನು ಕೂಡ ಬೆಂಗಳೂರಿಗನೇ ಮತ್ತು ಇಲ್ಲಿನ ಎಲ್ಲರಂತೆ ಈ ನಗರ ಅನುಭವಿಸುತ್ತಿರುವ ತೊಂದರೆಗಳಿಗೆ ಮೂಕಸಾಕ್ಷಿಯಾಗಿದ್ದೇನೆ.

ಬೆಂಗಳೂರಿನ ಅವನತಿಯನ್ನು ನೋಡಿ ಗೊಣಗುತ್ತಾ ಕೂಡುವ ಬದಲು, ನಾವೆಲ್ಲ ಅದಕ್ಕೆ ಅದರ ಹಿಂದಿನ ಶ್ರೇಷ್ಠತೆಯನ್ನು ತಂದು ಕೊಡುವ ಪ್ರಯತ್ನಕ್ಕೆ ಮುಂದಾಗಬೇಕು. ಇದನ್ನು ಸಾಧಿಸುವ ನಿಟ್ಟಿನಲ್ಲಿ ಮೊದಲನೆಯ ಹೆಜ್ಜೆಯೆಂದರೆ ನಮ್ಮನ್ನು ಪ್ರತಿನಿಧಿಸುವ ಶಾಸಕರು ಈ ಸತ್ಯಗಳನ್ನು ಅರ್ಥಮಾಡಿಕೊಂಡವರೆಂದು ಖಚಿತಪಡಿಸಿಕೊಳ್ಳುವುದು ಈ ಸಮಸ್ಯೆಗಳ ಬಗ್ಗೆ ಅರಿವಿರುವ ಮತ್ತು ನಗರಕ್ಕೆ ಅವಶ್ಯಕತೆಯಿರುವ ಶಾಸನಬದ್ಧ ಯೋಜನೆಯನ್ನು ಮತ್ತು ನಾಗರಿಕ ಕೇಂದ್ರಿತ ಆಡಳಿತಕ್ಕೆ ಮಣೆ ಹಾಕುವ ಎಮ್ಎಲ್ಎಗಳನ್ನು ನಾವು ಆಯ್ಕೆ ಮಾಡಬೇಕು. ಮತ್ತು ಅದಕ್ಕಾಗಿ ವಾಸ್ತವದಲ್ಲಿ ಏನನ್ನಾದರೂ ಮಾಡುವರೆಂಬ ಭರವಸೆಯನ್ನು ಮೂಡಿಸುವವರನ್ನು ಆರಿಸಬೇಕು. ಬೆಂಗಳೂರಿನ ಭವಿತವ್ಯವನ್ನು ಸಾಧಿಸಲು ಮೂಲಭೂತವಾಗಿ ಎರಡು ಕ್ರಮಗಳು ಅತ್ಯವಶ್ಯವಾಗಿವೆ ನಗರಕ್ಕಾಗಿ ಶಾಸನಬದ್ದವಾಗಿ ಯೋಜನೆಗಳನ್ನು ರೂಪಿಸಿವುದು ಮತ್ತು ನಾಗರಿಕ ಕೇಂದ್ರಿತ ಆಡಳಿತ ವ್ಯವಸ್ಥೆಯನ್ನು ಹಂತಹಂತವಾಗಿ ಜಾರಿಗೊಳಿಸುವುದು.

1. **ಯೋಜನೆ:**

ಸರಿಯಾದ ಯೋಜನೆಗಳಿಲ್ಲದಿದ್ದರೆ ಜೀವನದ ಗುಟಮಟ್ಟ ತಳಸ್ಥರಕ್ಕೆ ಕುಸಿಯುತ್ತದೆ. ಅಲ್ಲದೆ ನಿವಾಸಿಗಳು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲೂ ಕಷ್ಟವಾಗುತ್ತದೆ. ಇನ್ನೊಂದೆಡೆ, ಉತ್ತಮ ಯೋಜನೆಗಳನ್ನು ರೂಪಿಸಿ ಅನುಷ್ಠಾನಕ್ಕೆ ತರುವುದರಿಂದ ಆಡಳಿತದಲ್ಲಿ ಜನರಿಗೆ ನಂಬಿಕೆ ಮೂಡುತ್ತದೆ. ಚುನಾಯಿತ ಪ್ರತಿನಿದಿಗಳ ಐಡಿಯಾಗಳನ್ನು ಮತ್ತು ನಿರ್ವಾಹಕರ ಕಾರ್ಯಕಾರಿ ಕ್ರಮಗಳನ್ನು ಬೆಸೆಯುವಲ್ಲಿ 'ಸ್ಪಷ್ಟ ಯೋಜನೆ' ಗೋಂದಿನಂತೆ ವರ್ತಿಸುತ್ತದೆ.

ಕೆಟ್ಟ ರಸ್ತೆಗಳು, ಸೋರುವ ಪೈಪುಗಳು, ಕೈಕೊಡುವ ವಿದ್ಯುತ್ ಮತ್ತು ಸಾರಿಗೆಯ ಸಂಕಟಗಳಿಗೆಲ್ಲ ಜನತೆ ದೂರುವುದು 'ಮುಂದಾಲೋಚನೆ ಇಲ್ಲದೆ ರೂಪಿಸಲಾದ' ಯೋಜನೆಗಳನ್ನೇ, ದೀರ್ಘಾವಧಿಯ ಶಾಸನಬದ್ಧ ಪ್ರಾದೇಶಿಕ ಯೋಜನೆಗಳನ್ನು ಅನುಷ್ಠಾನಕ್ಕೆ ತರಬಲ್ಲ ಮೆಟ್ರೋಪಾಲಿಟನ್ ಪ್ಲಾನಿಂಗ್ ಕಮಿಟಿಯಿಂದ ಈ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದು. ಆಗ ಹಳಿ ತಪ್ಪಿಸುವ ಪಟ್ಟಭದ್ರ ಹಿತಾಸಕ್ತಿಗಳಿಂದ ನಗರವನ್ನು ರಕ್ಷಿಸಬಹುದು.

**2. ನಾಗರಿಕ ಕೇಂದ್ರಿತ ಆಡಳಿತ:**

ಅಭಿವೃದ್ಧಿ ಯೋಜನೆಗಳ ಜೊತೆಗೆ ಆಡಳಿತ ಸುಧಾರಣೆಯ ಅವಶ್ಯಕತೆಯೂ ಅಷ್ಟೇ ಇದೆ. ಪಾರದರ್ಶಕ ಆಡಳಿತ ಮತ್ತು ವಾರ್ಡ್ ಅಥವಾ ನಿವಾಸಿಗಳ ಏರಿಯಾ ಸಮಿತಿಗಳ ಹಲವಾರು ಚಟುವಟಿಕೆಗಳಲ್ಲಿ ನಾಗರಿಕರೂ ಪಾಲ್ಗೊಳ್ಳುವಂತಹ ಅವಕಾಶ ಸಿಗಬೇಕು. ಪ್ರತಿಯೊಂದು ಯಶಸ್ವೀ ಆಧುನಿಕ ನಗರಗಳಲ್ಲೂ – ಅಲ್ಲಿನ ಜನತೆಯ ದನಿ ಉತ್ತಮ ವಾಸಕ್ಕೆ ಮತ್ತು ಕೆಲಸಕ್ಕೆ ಪೂರಕವಾಗಬಲ್ಲ ಯೋಜನೆಗಳ ಪರ ಗಟ್ಟಿಯಾಗಿರುತ್ತದೆ. ಬೆಂಗಳೂರಿನ ವಿಷಯದಲ್ಲೂ ಹಾಗೇ ಆಗಬೇಕು.

ವಾಸಯೋಗ್ಯ ನಗರವಾಗಿ ಬೆಂಗಳೂರಿಗೆ ಉತ್ತಮ ಇತಿಹಾಸವಿದೆ. ಆದರೆ ಇಂದು ಆ ಆರಾಮದಾಯಕ ಮತ್ತು ಆಹ್ಲಾದಕರ ವಾತಾವರಣ ಕೈ ಜಾರಿ ಹೋಗುವ ಅಪಾಯವಿದೆ. ಹಾಗಾಗಿ ಪ್ರಮುಖ ಸಮಸ್ಯೆಗಳ ಪರಿಹಾರಗಳಲ್ಲಿ ಜನತೆಯ ಪಾತ್ರವೂ ಹೆಚ್ಚಾಗಬೇಕು. ಒಂದು ಸಮುದಾಯದ ಕಲ್ಪನೆಯಿಂದ ನಮ್ಮದೆಂಬ ಭಾವನೆ ಗಟ್ಟಿಯಾಗುತ್ತದೆ ಮತ್ತು ಇದರಿಂದ ಸುರಕ್ಷತೆಯ ಮತ್ತು ಭದ್ರತೆಯ ಭಾವನೆಯನ್ನುಂಟುಮಾಡುತ್ತದೆ.

ಇನ್ನು ಬೆಳವಣಿಗೆ ತಂದೊಡ್ಡಿರುವ ಸಮಸ್ಯೆಗಳನ್ನು ಪರಿಹರಿಸುವಲ್ಲಿ ನಗರದ ವಿವಿಧ ಸರ್ಕಾರಿ ಸಂಸ್ಥೆಗಳ ವೈಫಲ್ಯ ಕಳವಳಕ್ಕೀಡು ಮಾಡುತ್ತಿದೆ. ವಿವಿಧ ಯೋಜನೆಗಳು ಮತ್ತು ಆಡಳಿತಾತ್ಮಕ ಕಾರ್ಯಗಳ ನಿರ್ವಹಣೆಗೆ ನೈಪುಣ್ಯತೆ ಮತ್ತು ನಿರಂತರ ಗಮನದ ಅವಶ್ಯಕತೆಯಿದೆ. ಬೆಳೆಯುತ್ತಿರುವ ನಗರವನ್ನು ನಿಭಾಯಿಸಬೇಕಾದರೆ ಸರಿಯಾದ ತಿಳುವಳಿಕೆ ಮತ್ತು ತಂತ್ರಗಳನ್ನು ಹೊಂದಿದ ವಿಶೇಷಜ್ಞರ ಅವಶ್ಯಕತೆಯಿರುತ್ತದೆ. ನಗರ ನಿರ್ವಹಣೆಗೇ ಮೀಸಲಾದ ಒಂದು ತಂಡವನ್ನು ಅಭಿವೃದ್ಧಿಪಡಿಸುವುದರ ಜೊತೆಗೆ ಪಾರದರ್ಶಕವಾದ ಮತ್ತು ನಿವಾಸಿಗಳ ಅಭಿವೃದ್ಧಿಯನ್ನು ಕೇಂದ್ರಿಕರಿಸಿಕೊಂಡ ಸದೃಡ ಸಂಸ್ಥೆಗಳನ್ನು ಬೆಳೆಸುವುದು ತಕ್ಷಣದ ಅಗತ್ಯವಾಗಿದೆ.

## ಸಾರಾಂಶ

ನಮ್ಮ ನಗರಕ್ಕಿಂದು ಪಾರದರ್ಶಕತೆ ಮತ್ತು ಸುಧಾರಣೆಯ ಅಗತ್ಯವಿದೆ. ಹಾಗಾಗಲು ಶಾಸನಬದ್ಧ ಯೋಜನೆ ಮತ್ತು ನಾಗರಿಕ ಕೇಂದ್ರಿತ ಆಡಳಿತವನ್ನು ಎತ್ತಿಹಿಡಿಯುವಂತಹ ಕಾನೂನು/ಬಿಲ್ ಜಾರಿಯಾಗಬೇಕು,

ನಾನು ಮೊದಲೇ ಹೇಳಿದಂತೆ, ಬೆಂಗಳೂರಿಗರಾದ ನಾವು ನಮ್ಮ ನಗರದ ಭವಿಷ್ಯವನ್ನು ರೂಪಿಸುವ ಕೆಲಸಕ್ಕೆ ಕೂಡಲೇ ಮುಂದಾಗಬೇಕು. ಬೆಂಗಳೂರಿಗೆ ಎದುರಾಗಿರುವ ಸಮಸ್ಯೆಗಳ ಬಗ್ಗೆ ಹೆಚ್ಚು ಚರ್ಚೆ ನಡೆಸಿ, ಎದುರಾಗಲಿರುವ ಚುನಾವಣೆಗಳಲ್ಲಿ ಅರ್ಹ ಅಭ್ಯರ್ಥಿಗಳೇ ಆಯ್ಕೆಯಾಗುವ ಹಾಗೆ ನಾವು ಸಕ್ರಿಯವಾಗಿ ಕೆಲಸ ಮಾಡಬೇಕಿದೆ. ಬೆಂಗಳೂರು ಪ್ರಪಂಚದ ಅತ್ಯುತ್ತಮ ನಗರವಾಗಬಲ್ಲದು. ಆ ಕೆಲಸವನ್ನು ನಾವು ಮಾಡಬಲ್ಲೆವು.

ಹಾಗಾಗಿ ಮೇ ೧೨ರಂದು ತಪ್ಪದೆ ಮತವನ್ನು ಚಲಾಯಿಸಿ.

ಯೋಗ್ಯರಿಗೆ ಮತ ಚಲಾಯಿಸಿ, ಹೊಣೆಯರಿತು ಮತ ಚಲಾಯಿಸಿ, ನಮ್ಮ ಉತ್ತಮ ಬೆಂಗಳೂರಿಗಾಗಿ ನಿಮ್ಮ ಮತವಿರಲಿ.

**ಬೆಂಗಳೂರಿನ ಚುನಾವಣೆಯ ಬಗ್ಗೆ ನಿಮ್ಮ ಅನಿಸಿಕೆಗಳನ್ನು ತಿಳಿಸುವುದಿದ್ದಲ್ಲಿ, #BangaloreVotes ಇದನ್ನು ಬಳಸಿ ಟ್ವೀಟ್ ಮಾಡಿ.**

**ರಾಜೀವ್ ಚಂದ್ರಶೇಖರ್**

**ಸಂಸತ್ ಸದಸ್ಯರು**